**<u>ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ</u>**

**ಸಿ.ಸಿ. 238 /2020**

| | |
|---|---|
| ***ಹೆಸರು*** | ವೆಂಕೋಬ |
| ತಂದೆಯ ***ಹೆಸರು*** | ಹನುಮಂತಪ್ಪ |
| ***ವಯಸ್ಸು*** | 50 ವರ್ಷ |
| ***ವೃತ್ತಿ*** | ಕಂದಾಯ ನಿರೀಕ್ಷಕರು |
| ***ವಿಳಾಸ*** | ಸಿರುಗುಪ್ಪ . |

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 25-06-2025.**
**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ</u>**

1. 1 ನೇ ಆರೋಪಿ ರವರು ನನ್ನ ಅಳಿಯ. ಚಾಸಾ-1 ರವರು ನನ್ನ ಮಗಳು. ಚಾಸಾ-3 ರವರು ನನ್ನ ಹೆಂಡತಿ. ಚಾಸಾ-4 ಮತ್ತು 5 ರವರು ನನ್ನ ಗಂಡು ಮಕ್ಕಳು. ನನ್ನ ಮಗಳನ್ನು ಆರೋಪಿ ನಂಬರ್ 1 ರವರಿಗೆ ಕೊಟ್ಟು ಮದುವೆ ಮಾಡಿದೆವು. ಮದುವೆಯ ನಂತರ ಆರೋಪಿ ನಂಬರ್ 1 ಮತ್ತು ಚಾಸಾ-1 ರವರು ಸ್ವಲ್ಪ ದಿನಗಳ ಕಾಲ ಚೆನ್ನಾಗಿದ್ದರು. ನಂತರ ಆರೋಪಿ ನಂಬರ್ 1 ರವರು ಚಾಸಾ-1 ರವರಿಗೆ ತೊಂದರೆ ಕೊಡಲು ಶುರು ಮಾಡಿದರು. ತವರು ಮನೆಯಿಂದ ಹಣವನ್ನು ತೆಗೆದುಕೊಂಡು ಬಾ ಎಂದು ಕೇಳುತ್ತಿದ್ದನು. ನಂತರ ನಾವು ಸಿರುಗುಪ್ಪದಲ್ಲಿ ಬಾಡಿಗೆ ಮನೆಯನ್ನು ಮಾಡಿ ಅವರಿಗೆ ಇಟ್ಟಿದ್ದೇವು. ಅಲ್ಲಿಯು ಸಹ ಆರೋಪಿ ನಂಬರ್ 1 ರವರು ಚೆನ್ನಾಗಿ ಜೀವನವನ್ನು ಮಾಡಲಿಲ್ಲ. ಆರೋಪಿ ನಂಬರ್ 1 ರವರ ಚಾಸಾ-1 ರವರಿಗೆ ಹೊಡೆಯುವುದು, ಕೆಟ್ಟ ಮಾತಿನಿಂದ ಬೈಯುವುದು ಮಾಡಿದನು. ನಾನು ಬುದ್ಧಿವಾದ ಹೇಳಲು ಆರೋಪಿ ನಂಬರ್ 1 ರವರ ಮನೆಗೆ ಹೋದಾಗ ಆತನು ನನಗೆ ಒದ್ದನು. ನಂತರ ಚಾಸಾ-1 ರವರನ್ನು ನಾನು ನಮ್ಮ ಮನೆಗೆ ಕರೆದುಕೊಂಡು ಬಂದಿರುತ್ತೇನೆ. ಬೇರೆ ಮನೆ ಮಾಡಲು ಆರೋಪಿ ನಂಬರ್ 1 ರವರು ಒಪ್ಪಲಿಲ್ಲ. ಒಂದು ದಿನ ನನ್ನ ಮಗಳು ತನ್ನ ಗಂಡನ ಮನೆಯಿಂದ ಗ್ಯಾಸ್ ಬೇಕೆಂದು ಕರೆ ಮಾಡಿ ಕೇಳಿದಾಗ ನಾನು ಚಾಸಾ-4 ರವರಿಗೆ ಹೇಳಿದ್ದು,

ಅವನು ಗ್ಯಾಸ್ ಅನ್ನು ಚಾಸಾ-1 ರವರ ಮನೆಗೆ ಇಟ್ಟು ಬಂದಿದ್ದನು. ನಂತರ ಆರೋಪಿ ನಂಬರ್ 1 ರವರು ಚಾಸಾ-1 ರವರಿಗೆ ಹಿಂಸೆ ಕೊಟ್ಟು ಗ್ಯಾಸ್ ಅನ್ನು ಸ್ಫೋಟ ಮಾಡಿ ಕೊಲ್ಲುತ್ತೇನೆ ಎಂದು ಬೆದರಿಕೆ ಹಾಕಿದನು. ನಂತರ ಚಾಸಾ-1 ರವರು ದೂರನ್ನು ದಾಖಲು ಮಾಡಿದರು. ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿದ್ದೇನೆ.

**ಪಾಟಿ ಸವಾಲುಃ ಆರೋಪಿ ಪರ ವಕೀಲರು ಕಾಲವಕಾಶವನ್ನು ಕೇಳಿದ್ದು ಸಕಾರಣ ಇಲ್ಲವಾದ್ದರಿಂದ ಮನವಿಯನ್ನು ತಿರಸ್ಕರಿಸಿ ಪಾಟೀಸವಾಲನ್ನು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)
ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**